Reg No M. 1229 Sri 7—3—1956

೩೯ನೇ ವರ್ಷ - 39 th Year

# ಸತ್ಯವಾದಿ

SATYAVADI

ಬಿಡಿ ಪ್ರತಿ 3 ಪೈ ] ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ರಾಯರು

## ಪ್ರಾರಂಭೋತ್ಸವ

ಮೈಸೂರು 7 — ವಿದ್ಯಾರಣ್ಯಪುರದ ಬಳಿ ಹೊಸದಾಗಿ ಸ್ಥಾಪಿಸಲ್ಪಡುವ ಪುರ ಸಭೆಯ ರೇಡಿಯೋ ಪ್ರಸಾರ ಮುಂದಿರದ ಪ್ರಾರಂಭೋತ್ಸವವನ್ನು ನಾಳಿದ್ದು ಸಂಜೆ 6-30 ಗಂಟೆಗೆ ಪುರಸಭಾ ಕಮಿಷನರ್ ಶ್ರೀ ಎ. ವಿಶ್ವನಾಥಂರವರು ನೆರವೇರಿಸುವರು.

## ಗುರೂಜಿಯವರ ಜನ್ಮೋತ್ಸವ

ಮೈಸೂರು 7 — ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಂಸ್ಥಾಪಕಾಚಾರ್ಯರಾದ ಪರಮಪೂಜನೀಯ ಶ್ರೀ ಗುರೂಜಿಯವರ 51 ನೆಯ ಜನ್ಮದಿನೋತ್ಸವ ಅಂಗವಾಗಿ ಸಾರ್ವಜನಿಕ ಸಮಾರಂಭವನ್ನು ನಾಳೆ ಸಂಜೆ 6-30 ಗಂಟೆಗೆ ಪುರಭವನ ಮೈದಾನದಲ್ಲಿ ಏರ್ಪಡಿಸಿದೆ. ಸತ್ಕಾರ ಸಮಿತಿ ಅಧ್ಯಕ್ಷರಾದ ಶ್ರೀ ಜಿ. ಆರ್. ಜೋಸ್ಯರ್ ಅಧ್ಯಕ್ಷತೆ ವಹಿಸುತ್ತಾರೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಪ್ರಾಂತ ಪ್ರಚಾರಕ ಶ್ರೀ ಯಾದವರಾವ್ ಜೋಷಿ ಭಾಷಣ ಮಾಡುವರು.

## ಕಾಫಿ ಉತ್ಪನ್ನ

ಬೆಂಗಳೂರು 6 — ಕಾಫಿ ಉತ್ಪನ್ನ 55-56 ನೇ ಸಾಲಿಗೆ 28759 ಟನ್‌ಗಳೆಂದು ಈಗ ಅಂದಾಜಾಗಿದೆ.

## ವಿನೋಬಾ ಭೇಟಿಗೆ ನೆಹ್ರು

ಹೈದರಾಬಾದ್ 6 — ಮೂಧವರಾವ್‌ಪಲ್ಲಿಗೆ ಭೂದಾನಯಜ್ಞ ವಿನೋಬಾ ಭಾವೆಯವರ ಭೇಟಿ ಸುದ್ದಿಯು ತಿಳಿಯಿತು.

## ಎಚ್ಚರಿಕೆಯಿಂದ ರಕ್ಷಿಸಬೇಕು

ನವದೆಹಲಿ 6 — ಭಾರತ ಮತ್ತು ದಕ್ಷಿಣ ಪೂರ್ವ ಏಷ್ಯಾ ಸಂಘದ ಅಧ್ಯಕ್ಷ ಶ್ರೀ ನಿರ್ಮಲಚಂದ್ರ ಹೇಳಿದರು. ಭಾರತದಲ್ಲಿ ವೃತ್ತಪತ್ರಿಕಾ ಉದ್ಯಮವನ್ನು ಎಚ್ಚರಿಕೆಯಿಂದ ರಕ್ಷಿಸಿಕೊಂಡುಬರಬೇಕೆಂದರು.

## ಸ್ಮಾರಂಪು ಕಳವು

ಭೀಮಾವರಂ ಮಾ ೫— ಸ್ಥಳೀಯ ಸಬ್ ಟ್ರಜರಿ ವರಾಂಡಾದಲ್ಲಿ ತಾವಿ. ದ್ದಾಗ ತವುಲ್ಲಿದ್ದ ರೂ 1700 ನಗದು ಹಣ ಮತ್ತು 500 ರೂಗಳ ಕೋರ್ಟ್‌ಫೀ ಮತ್ತಿತರ ಸ್ಟಾಂಪುಗಳಿದ್ದ ಪೆಟ್ಟಿಗೆಯು ಕಳುವಾಗಿದೆಯೆಂದು ಸ್ಟಾಂಪುವೆಂಡರು ನಾಗೇಶ್ವರರಾಯರೆನ್ನುವವರು ಪೋಲೀಸರಿಗೆ ದೂರುಕೊಟ್ಟಿದ್ದು ತನಿಖೆ ನಡೆಯುತ್ತಿದೆ.

## ಉದ್ಯೋಗಹೀನರು

ನವದೆಹಲಿ ಮಾ 6— ಭಾರತಾದ್ಯಂತ 1955 ರ ಡಿಸೆಂಬರು ಅಂತ್ಯಡನರೆಗೆ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಒಟ್ಟು 216157 ಮಂದಿ ವಿದ್ಯಾವಂತ ನಿರುದ್ಯೋಗಿಗಳು ದಾಖಲಾತಿ ಪಡೆದಿರುವರು : ಈ ಸಂಖ್ಯೆಯಲ್ಲಿ 189933 ಮಂದಿ ಮೆಟ್ರಿಕ್ಯುಲೇಷನ್ ಮಾಡಿರುವವರು ಮತ್ತು 26224 ಮಂದಿ ಪದವೀಧರರೂ ಇರುವರು.

## ದೊಡ್ಡ ಕಟ್ಟಡ ನಿರ್ಮಾಣ

ಬೆಂಗಳೂರು ಕಂಟೋನ್ಮೆಂಟಿನಲ್ಲಿ ಇಂಡಿಯನ್ ಕಾಫೀ ಬೋರ್ಡಿನವರು 11 ಲಕ್ಷ ರೂಗಳ ಖರ್ಚಿನಿಂದ ಒಂದು ಭಾರಿ ಕಟ್ಟಡ ಕಟ್ಟಲಿರುವರೆಂದು ತಿಳಿಯಬಂದಿದೆ.

## ನೆಹ್ರುವಿನಲ್ಲಿ ವಿನಂತಿ

ನಿಜಾಮಾಬಾದು.... ಎಸ್.ಸಿ. ಶಿಫಾರಸಿನಂತೆ ಒಳ್ಳಾರಿಯನ್ನು ಆಂಧ್ರಕ್ಕೇ ಕೊಡಬೇಕೆಂದು ಆಂಧ್ರ ನಾಯಕರ ನಿಯೋಗವು ಪ್ರಧಾನಿ ನೆಹರೂರವರನ್ನು ಭೇಟಿಮಾಡಿ ವಿನಂತಿಸಿಕೊಂಡಿತು.

---

ನವದೆಹಲಿ ಮಾ ೬— ಇಸವರಿಯುಲ್ಲಿ ಬೊಂಬಾಯಿನಲ್ಲಿ ನಡೆದ ದಂಗೆಗಳ ಪರಿಣಾಮವಾಗಿ ರೈಲ್ವೇ ಅದಾಯದಲ್ಲಿ 40 ಲಕ್ಷ ರೂಗಳ ಕೊರತೆಯಾಯಿತೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು

# ಭಾರತದ ರಕ್ಷಣಾ ವೆಚ್ಚ ಹೆಚ್ಚಬೇಕು

ಬೊಂಬಾಯಿ ಮಾ ೫— ಬೊಂಬಾಯಿ ನಗರಕ್ಕೆ ಇಂದು ಆಗಮಿಸಿದ ಇರ್ಷಾ ದಂಪತಿಗಳ ಸ್ವಾಗತಕಾರ್ಯ, ಪ್ರಮುಖ ರಸ್ತೆಗಳಲ್ಲಿ ಇರ್ಷಾ ಮತ್ತು ಭಾರತದ ತ್ರಿವರ್ಣ ಧ್ವಜಗಳು ಒಟ್ಟಿಗೆ ಹಾರಾಡುತ್ತಿದ್ದು, ನೋಡುವುದಕ್ಕೆ ರಮ್ಯವಾಗಿದ್ದವು

ನವದೆಹಲಿ ಮಾ ೫— ಪಾರ್ಲಿಮೆಂಟಿನಲ್ಲಿ ಕಮ್ಯೂನಿಸ್ಟ್ ಪಕ್ಷದ ನಾಯಕರಾದ ಶ್ರೀ ಎ ಕೆ ಗೋಪಾಲಕ್ ಮತ್ತು ಇನ್ನಿಬ್ಬರು ಕಮ್ಯೂನಿಸ್ಟ್ ಸದಸ್ಯರು ಕೇಂದ್ರ ವಿದ್ಯಾ ಮಂತ್ರಿ ಮೌಲಾನಾ ಅಜಾದರನ್ನು ಭೇಟಿ ಮಾಡಿ, ಬಂಗಾಳಾ-ಬೀಹಾರು ವಿಲೀನಕರಣದ ಬಗ್ಗೆ ಜನರ ವಿರೋಧವನ್ನು ತಿಳಿಸಿದರು.

ಕಾಸ್ಪುರ ಮಾ ೫— ಇಲ್ಲಿ ನಡೆಯುತ್ತಿರುವ ಸೋವಿಯಟ್ ಹತ್ತಿಬಟ್ಟೆ ಕೈಗಾರಿಕೆಯ ಪ್ರದರ್ಶನದಲ್ಲಿಂದು ಮಧ್ಯಾಹ್ನ ಬೆಂಕಿ ಅನಾಹುತವಾಗಿ ಪ್ರಮುಖ ವಸ್ತುಗಳೂ ಯಂತ್ರೋಪಕರಣಗಳೂ ಉರಿದುಹೋದವು.

ಬೊಂಬಾಯಿ ಮಾ ೫— ಬೊಂಬಾಯಿ ಪ್ರಾಂತವು ಪೋಲೀಸು ರಾಜ್ಯ ಎಂಬದಾಗಿ ಬೊಂಬಾಯಿ ಅಸೆಂಬ್ಲಿಯಲ್ಲಿಂದು ಇಬ್ಬರು ಟೀಕಿಸಿದಾಗ, ಇವರನ್ನು ಕೆಲವು ಕಾಂಗ್ರೆಸ್ಸು ಸದಸ್ಯರು ಖಂಡಿಸಿದರು.

ಹೊರದೇಶಗಳಿಂದ ಭಾರತಕ್ಕೆ ಬರುವ ಪ್ರವಾಸಿಗರ ಸಹಾಯಕ್ಕಾಗಿ ಒಂದು ಪೋಲೀಸು ಪಡೆಯನ್ನು ಏರ್ಪಡಿಸಲು ಭಾರತ ಸರಕಾರವು ಯೋಚಿಸುತ್ತಿದೆ ಎಂದು ಹೇಳಲಾಗಿದೆ; ಇಂತಹ ಏರ್ಪಾಡು ಈಜಿಪ್ಟಿನಲ್ಲಿದೆಯಂತೆ.

## ಮನುಷ್ಯನನ್ನು ನುಂಗಿದ ಮರ

ಸೆಂಟ್ ಎಟಿಯೆನ್ ( ಫ್ರಾನ್ಸ್ ).... ಬೆಲೆನಾವಿಸ್ಸಿನಲ್ಲಿ ವೃದ್ಧಸಾಯಿ ಕಾರ್ಮಿಕ ಸೊಬ್ಬನು ತನ್ನ ತಮ್ಮನ ಜೊತೆಯಲ್ಲಿ ಜೊಂಡುಗಳನ್ನು ಕತ್ತರಿಸುತ್ತಿದ್ದಾಗ, ಹತ್ತಿರದಲ್ಲಿದ್ದ ಒಂದು ಮರವು ಅವನನ್ನು ನುಂಗಿತು : ಮರದ ಒಳಗೆ ಬೊಳ್ಳಾಗಿದ್ದ ಇವನು ಒಳಗೆ ಒದ್ದಾಡುತ್ತಿದ್ದುದು ತಮ್ಮನಿಗೆ ಕೇಳಿಸಿತು; ಇವನ ಬಿಡುಗಡೆಗಾಗಿ ಮರವನ್ನೇ ಕತ್ತರಿಸಬೇಕಾಯಿತು.

ಹರಿಹರ ಮಾ6— ಇಲ್ಲಿ ನಿನ್ನೆ ಸಂಭವಿಸಿದ ಅಗ್ನಿಪ್ರಕರಣ ಪರಿಹಾರಕಾರ್ಯಕ್ಕೆ ಸಮಿತಿ ರಚಿಸಲಾಗಿದೆ — ಸರಕಾರ ರೂ 10 ಸಾವಿರ ಮಂಜೂರ್ಮಾಡಿದೆ.

ಇಂಫಾಲು ಮಾ ೫— ನೇತಾಜಿ ಸುಭಾಷ ಬೋಸರು ೧೯೪೫ ನೇ ಆಗಸ್ಟು ೧೯ ರಂದು ನಡೆದ ವಿಮಾನ ಅಪಘಡದಲ್ಲಿ ನಿಧನರಾದರೆಂದು ಜಪಾನಿನ ಯುದ್ಧಗೋರಿಗಳ ಕಮಿಷನ್ನಿನ ನಾಯಕರಾದ ಎಂ || ಸುಕೆಜೊಮಿಯುಕೆಯರು ತಿಳಿಸಿದರು.

ನವದೆಹಲಿ ಮಾ ೬— ಪಾಕಿಸ್ತಾನದ ಮಿಲಿಟರಿ ಕೂಟಗಳ ಕಾರಣಗಳಿಂದ ಸರಕಾರವು ರಕ್ಷಣೆಗೆ ಹೆಚ್ಚು ವೆಚ್ಚ ಮಾಡಬೇಕಲ್ಲದೆ ಭಾರತ ರಕ್ಷಣಾ ಉದ್ಯಮಗಳನ್ನು ನಿರ್ಮಿಸಲು ಕ್ರಮಕೈಗೊಳ್ಳಬೇಕೆಂದು ರಾಜ್ಯಸಭೆಯಲ್ಲಿ ಕಾಂಗ್ರೆಸ್ಸು ಹಾಗು ವಿರೋಧಪಕ್ಷ ಸದಸ್ಯರುಗಳು ಒಟ್ಟಿಗೆ ಸೇರಿ ಒತ್ತಾಯ ಮಾಡಿದರು

ಲಕ್ನೊ ಮಾ ೫— ಮುಂದಿನ ವಿಧಾನಸಭೆಯ ಚುನಾವಣೆಯಲ್ಲಿ ಹರಿದ್ವಾರದಲ್ಲಿ ನಡೆಯಲಿರುವ ಅರ್ಧ ಕುಂಭಮೇಳಕ್ಕೆ ಸುಮಾರು 12 ಲಕ್ಷ ಯಾತ್ರಿಕರು ಬರುವ ನಿರೀಕ್ಷಣೆ ಇದೆ ; ಉತ್ತರ ಪ್ರದೇಶ ಸರಕಾರವು ಈ ಒಗ್ಗೆ ಸುಮಾರು 26 ಲಕ್ಷ ರೂಗಳ ವೆಚ್ಚದಲ್ಲಿ ವಿಶೇಷ ಸಿದ್ಧತೆಗಳನ್ನು ಕೈಗೊಂಡಿರುತ್ತದೆ.

ಶ್ರೀರಂಗಪಟ್ಟಣ ಮಾ ೬— ಪೌರಸಭಾ ಚುನಾವಣೆಯಲ್ಲಿ ಇದನೇ ವಿಜಯೋತ್ಸವ ಪೋಟೊ ಪೆಟ್ಟಿಗೆಯೊಂದರಲ್ಲಿ ಒಂದು ವಾಲ್ವಟ್ಯೂಬೂ ಒಂದು ಬ್ಲೇಡೂ ಇದ್ದುದು ಕಂಡುಬಂದಿತು ; ಇಪ್ಪತ್ತೊಂದನೆ ಡಿವಿಜನ್ ಪೆಟ್ಟಿಗೆಯಲ್ಲಿ ಕೇವಲ ಒಂದೇ ಒಂದು ಬ್ಯಾಲೆಟ್ ಪೇಪರಿದ್ದುದು ಕಂಡುಬಂದಿತು

ಮೈಸೂರು ಮಾ 7— ಈ ಬೆಳಿಗ್ಗೆ ಮೈಸೂರು ನಾರ್ತ್ ಪೋಲೀಸು ಸ್ಟೇಷನ್ನಿನ ವರ್ಗಾವಣೆ ಹೆಡ್‌ಕಲ್‌ಗೆ ಆಯುಕ್ತರು ಐ ಜಿ ಪಿ ತಿಮ್ಮಪ್ಪರಾಜೇ ಅರಸುರವರು ಸ್ವತಃ ತೃತ್ವದಲ್ಲಿ ಈ ಸಮಾರಂಭ ನಡೆಯಿತು

## ನಾಳೆಯ ಪಂಚಾಂಗ

ಅ || ವ ಹಾವಿದ್ವಾನ್ ದೈವಜ್ಞ ಶಿರೋಮಣಿ ಸಂಪತ್ಕೃಷ್ಣಜೋಯಿಸರಿಂದ

೪ ಗುರುವಾರ ಏಕಾದಶಿ ಉತ್ತರಾಷಾಢ ಸರ್ವತ್ರ ಏಕಾದಶಿ

## ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ವೇಶ್ಯಾ ವಿಕ್ರಯ ವ್ಯಾಪಾರ

ವ್ಯಭಿಚಾರಕ್ಕಾಗಿ ಬಿಳೀ ಹುಡುಗಿಯರ ಸಾಗಾಟ ಹಡಗುಗಳ ಮೂಲಕ ಒಂದು ಐರೋಪ್ಯ ರಾಷ್ಟ್ರದಿಂದ ಮತ್ತೊಂದು ಐರೋಪ್ಯ ರಾಷ್ಟ್ರಕ್ಕೆ ನಡೆಯುತ್ತಲೇ ಇದೆ : ಮುಖ್ಯವಾಗಿ ಇಟಲಿ ಮತ್ತು ಫ್ರಾನ್ಸುಗಳಿಂದ ಈ ಸಾಗಾಟ ವಿಶೇಷವಾಗಿ ನಡೆಯುತ್ತಿದೆ ; ಇಟಲಿಯಲ್ಲಿ ಲೈಸೆನ್ಸು ಹೊಂದಿದ ಸುಮಾರು ೫೦೦೦ ಮಂದಿ ವೇಶ್ಯೆಯರು ೭೦೦ ಲೈಸೆನ್ಸ್ಡ್ ವೇಶ್ಯಾಗೃಹಗಳಲ್ಲಿ ಅಶ್ಲೀಲ ವ್ಯಾಪಾರ ನಡೆಸಿಕೊಂಡಿದ್ದಾರೆ ; ಇನ್ನು ಲೈಸೆನ್ಸು ಇಲ್ಲದೆ ಗುಪ್ತರೀತಿಯಲ್ಲಿ ದೇಹವಿಕ್ರಯ ನಡೆಸಿಕೊಂಡಿರುವ ಸೂಳೆಯರು ಮತ್ತು ಸೂಳೆ ಮನೆಗಳು ಲೆಕ್ಕವಿಲ್ಲದಷ್ಟು ಇವೆ ; 1948 ರಿಂದ 1950 ರವರೆಗೆ ಸುಮಾರು 1 ಲಕ್ಷ ಮಂದಿ ಲೈಸೆನ್ಸಿಲ್ಲದೆ ಅಶ್ಲೀಲ ವ್ಯಾಪಾರ ನಡೆಸಿಕೊಂಡಿದ್ದ ತರುಣಿಯರ ದಸ್ತಗಿರಿಯಾಗಿ ಅವರಲ್ಲಿ 19000 ಮಂದಿಯನ್ನು ಆಸ್ಪತ್ರೆಗಳಲ್ಲಿ ಲೈಂಗಿಕ ವ್ಯಾಧಿಗಳ ವಾರ್ಡುಗಳಿಗೆ ಸೇರಿಸಲಾಗಿತ್ತು.

ವ್ಯಭಿಚಾರದ ಕುರಿತಾದ ಅಂತರರಾಷ್ಟ್ರೀಯ ವ್ಯಾಪಾರವು ಫ್ರಾನ್ಸಿನಲ್ಲಿ ಯೂ ವಿಸ್ತಾರ ಕ್ಷೇತ್ರದಲ್ಲಿ ನಡೆಯುತ್ತಿದೆ ; ಐರೋಪಿನಿಂದ ನುಧ್ಯಪೂರ್ವ, ದೂರಪೂರ್ವ, ದಕ್ಷಿಣಆಫ್ರಿಕಾಕ್ಕೆ ರಫ್ತಾಗುವವೇಶ್ಯೆಯರಿಗಿಂತಲೂ ಅಧಿಕಸಂಖ್ಯೆಯ ಸೂಳೆಯರು ಫ್ರಾನ್ಸ್ನಿಂದರಿಂದಲೇ ರಫ್ತಾಗುತ್ತಿದ್ದಾರೆ.

ಆಫ್ರಿಕದಲ್ಲಿ ಹಳ್ಳಿಯ ಮುಖಂಡರು ಮತ್ತು ಹೆತ್ತವರು ಈ ವ್ಯಾಪಾರದಲ್ಲಿ ಹೆಚ್ಚಿನ ಲಾಭ ಪಡೆಯುತ್ತಿದ್ದಾರೆ ; ನೈಜೀರಿಯಾದಲ್ಲಿ ಈ ಸಂಬಂಧವಾಗಿಯೇ ಹೆಣ್ಮಕ್ಕಳನ್ನು ಕಳವು ಮಾಡುತ್ತಾರೆ ; ತಮ್ಮ ವೇಶ್ಯೆಯರಲ್ಲಿ ಹೆಚ್ಚಿನವರು ಯೂರೋಪಿಯನ್ ಮತ್ತು ವರ್ಣ ಬಾಲೆಯರು— ಹೆಚ್ಚಿನ ವೇಶ್ಯೆಯರು ಪೋರ್ಚುಗೀಸು ಪೂರ್ವ ಆಫ್ರಿಕಾಕ್ಕೆ ಸಾಗಿಸಲ್ಪಡುತ್ತಾರೆ, ಎಂಬುದಾಗಿ ದಕ್ಷಿಣ ಆಫ್ರಿಕಾ ಯೂನಿಯನ್ ಸರಕಾರವು ಯುಕ್ತರಾಷ್ಟ್ರ ಸಂಘಕ್ಕೆ ವರದಿ ಮಾಡಿದೆ.

ಜಗತ್ತಿನ ಅತಿ ಪ್ರಮುಖ ವೇಶ್ಯಾ ವ್ಯಾಪಾರ ಕೇಂದ್ರವೆಂದರೆ, ಕೇಂದ್ರ ಅವೈರಿಕಾದ ಪನಾಮಾ ಪ್ರಜಾಪ್ರಭುತ್ವ : ಅಲ್ಲಿಯ ವೇಶ್ಯಾಗೃಹಗಳಲ್ಲಿ ಹೊಸ ಹೊಸ ಮಾಲು ಹೊರಗಿನ ರಾಷ್ಟ್ರಗಳಿಂದ ದಲ್ಲಾಳಿಗಳ ಮೂಲಕ ಆಮದಾಗುತ್ತಲೇ ಇರುತ್ತದೆ ; ವಿಲ್ಲುಗಳಿಗೆ ನ್ಯಾಯವೊದ್ದುವಂತೆ ಕಂಟ್ರಾಕ್ಟುಗಳ ವೇರೆಗೆ ವೇಶ್ಯೆಯರು ಇಲ್ಲಿಗೆ ಆಮದಾಗುವುದರಿಂದ, ಈ ಅನೈತಿಕ ವ್ಯಾಪಾರದ ಸುಳಿವು ಹತ್ತಿಯೂ ಅದನ್ನು ತಡೆಯಲು ಪೋಲೀಸರು ನಿಸ್ಸಹಾಯಕರಾಗಿದ್ದಾರೆ. [ಮಂ ಸ್ರ

ನವ ದೆಹಲಿ – ಸಾವಿರ ಜನರಿಗೂ ಮಿಗಿಲಾದ ಜಾನಪದ ನೃತ್ಯಗಾರರು ಅವರ ಮಧ್ಯೆ ಪಂ॥ ನೆಹರು ಇದ್ದಾರೆ ಬೊಂಬಾಯಿ ಜಾನಪದ ಕೂಟದವರು ಕೊಟ್ಟಿರುವ ನೃತ್ಯದ ಕಲೆ ಉಡುಪನ್ನು ಅವರು ಧರಿಸಿದ್ದಾರೆ


ನೂ ಅಪೆರಾ ಶಿ — ಕಿಕ್ಕಿರಿದ ಜನಸ್ತೋಮಕ್ಕೆ ಪ್ರದರ್ಶಿಸಲಾಗುತ್ತಿದೆ

ಆದರ್ಶ 10 ನೇ ವಾರ ಆದರ್ಶ ಸತಿ

ಪಾತ್ರ : ಆರ್. ನಾಗೇಂದ್ರರಾವ್, ಜಮುನ, ಜಾನಕಿ, ಮೂಲಕ, ಮೋಹನ

ಮಹೋನ್ನತ ಕನ್ನಡ ಚಿತ್ರ [ ದಿನ 3 ಆಟಗಳು ]

10 ನೇ ತಾ॥ ಶನಿವಾರ ಮಹಾಶಿವರಾತ್ರಿ ಪ್ರಯುಕ್ತ ರಾತ್ರಿ 1 ಗಂಟೆಗೆ ಸ್ಪೆಷಲ್ ಆಟವನ್ನು ಏರ್ಪಡಿಸಲಾಗಿದೆ

ವುಡ್‌ಲ್ಯಾಂಡ್ಸ್ 2-3-56 ರಿಂದ

ಭಾಗಂಭಾಗ್

ತಾರಾಗಣ— ಭಗವಾನ್, ಶಶಿಕಲಾ, ಕಿಶೋರ್‌ಕುಮಾರ್, ಸ್ಮೃತಿ ಬಿಶ್ವಾಸ್

ನೇತ್ರಾನಂದ ನೃತ್ಯಗಳು, ಕರ್ಣಾನಂದ ಸಂಗೀತ ಆಶ್ಚರ್ಯಕರ ಡಂಗುಬಡಿಸುವ ಸನ್ನಿವೇಶಗಳಿಂದ ತುಂಬಿತುಳುಕುತ್ತಿರುವ ಅತ್ಯಂತ ಮನರಂಜನೀಯ ಹಿಂದಿ ಚಿತ್ರ.

ದಿನವಹಿ 3 ಪ್ರದರ್ಶನ

Protect the Cow ಗೋ ಸಂರಕ್ಷಣೆಮಾಡಿ

' ಗೋರಕ್ಷಣ ' ಪತ್ರಿಕೆಗೆ ಚಂದಾದಾರರಾಗಿರಿ ; ವಾರ್ಷಿಕ ಚಂದ 8 ಆಣೆ

ಪ್ರೋತ್ಸಾಹಕರ ಚಂದಾ ಒಂದೇಸಾರಿ ರೂ 10 ; ಅವರಿಗೆ ಸದಾ ಪತ್ರಿಕೆ ಉಚಿತ



ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ಮುಂತಾದ ವಿಚಾರಗಳ ತ್ನೊಳಗೊಂಡಿರುವ ಏಕೈಕ ಕನ್ನಡ ಪತ್ರಿಕೆ

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

ಎಲ್ಲಾ ವಿಧವಾದ ಆಯುರ್ವೇದ ಔಷಧಿಗಳಿಗೂ ಅಶೋಕ ಫಾರ್ಮಸಿ ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

For Quality Printing

L. N. Press

Sivarampet, Mysore

ರಣಜಿತ್ ಈ ದಿವಸ ಜಾ ಸೂ ಸ್ (ಹಿಂದಿ)

ಶಕ್ತಿಸುಧಾ — ಉತ್ತಮ ಟಾನಿಕ್ —


Edited, Printed & Published by Dharma Prachara Nirata M. S Krishna Rao, at the Satyavadi Press, Chamarajapuram, Mysore